ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 898/2020 .

ಪ್ರಾ.ಸಾ. :12
ಚಾ.ಸಾ. :18

| | | |
|---|---|---|
| ಹೆಸರು | : | ಶ್ರೀಪಾಲ ಕೆ |
| ತಂದೆಯ ಹೆಸರು | : | ಕೆಂಪಯ್ಯ ಎನ್ ಜೆ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ |
| ವಿಳಾಸ | : | ಗುಂಡ್ಲುಪೇಟೆ |

... ........................................................................................................ ...

ದಿನಾಂಕ 08 ನೇ ಜುಲೈ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

ನಾನು 2019 ರಿಂದ 2023 ತನಕ ಮೇಲುಕಾಮನಹಳ್ಳಿ, ಗುಂಡ್ಲುಪೇಟೆ ತಾಲೂಕಿನಲ್ಲಿ ವಿಶೇಷ ಹುಲಿ ಸಂರಕ್ಷಣಾ ದಳದಲ್ಲಿ ಉಪ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೆ. ಈ ಪ್ರಕರಣದಲ್ಲಿ ಶ್ವಾನದಳ ಕಾರ್ಯಚರಣೆ ನಿಮಿತ್ತ ಇಲ್ಲಿಗೆ ಬಂದಿರುತ್ತೇನೆ.

ದಿ. 25.08.2020 ರಂದು ನಿರ್ದೇಶಕರು ರಾಜೀವ ಗಾಂದಿ ರಾಷ್ಟ್ರೀಯ ಉದ್ಯಾನದವರ ಮೌಖಿಕ ಆದೇಶದಂತೆ ಕಲ್ಲಹಾಳ ವನ್ಯ ಜೀವಿ ವಲಯದಲ್ಲಿ ಹುಲಿ ಹತ್ಯೆ ಪ್ರಕರಣಕ್ಕೆ ಸಂಬಂದಿಸಿದಂತೆ ಶ್ವಾನದಳವನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಅದರಂತೆ ನಾನು ದಿ. 25.08.2020 ರಂದು ನಾನು ರಾಣಾ ಎಂಬ ಹೆಸರಿನ ಶ್ವಾನದೊಂದಿಗೆ ನಾಗರಹೊಳೆ ವನ್ಯ ಜೀವಿ ವಲಯಕ್ಕೆ ರಾತ್ರಿ ವೇಳೆ ಬಂದಿರುತ್ತೇನೆ. ಸದರಿ ರಾಣಾ ಶ್ವಾನವನ್ನು ನೋಡಿಕೊಳ್ಳುವಂತಹ ಕಾಳ ಕಲ್ಬರ್ ಮೊಗೆ ಎಂಬ ವ್ಯಕ್ತಿ ಸಹ ನಮ್ಮ ಜೊತೆ ಬಂದಿರುತ್ತಾರೆ. ರಾತ್ರಿ ಆಗಿದ್ದ ಕಾರಣ ಮರುದಿನ ನಾವು ಕಾರ್ಯಚಾರಣೆಯನ್ನು ಪ್ರಾರಂಭಿಸಿದೆವು.

ಮರುದಿನ ಅಂದರೆ ಅಂದರೆ ದಿ. 26.08.2020 ರಂದು ಚಾಸಾ 20, 2, ಕಲ್ಲಹಾಳಅರಣ್ಯ ವಲಯದ ಸಿಬ್ಬಂದಿಗಳು ಹಾಗೂ ಶ್ವಾನದಳದ ಸಿಬ್ಬಂದಿಯವರೆಲ್ಲರೂ ಮಲ್ಲೂರು ಶಾಖೆ, ತಟ್ಟೆಕೆರೆ ಗಸ್ತು, ಕೆಸುವಿನ ಹಾಡ್ಲು ಸ್ಥಳಕ್ಕೆ ಹೋದೆವು. ಅಲ್ಲಿಂದ ರಾಣಾ ಶ್ವಾನವು ನಮ್ಮನ್ನು ತಟ್ಟೆಕೆರೆ ಗ್ರಾಮದ ಸಂತೋಷ್

ಎಂಬುವವರ ಮನೆಗೆ ಕರೆದುಕೊಂಡು ಹೋಗಿರುತ್ತದೆ. ತನಿಖಾದಿಕಾರಿಗಳು ಸದರಿ ಮನೆಯವರಿಗೆ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಶ್ವಾನ ಸೂಚಿಸಿದ ಸೂಚನೆಯಂತೆ ಪರಿಶೀಲಿಸಬೇಕು ಸೂಚನೆ ನೀಡಿದರು. ಮನೆಯನ್ನು ಪರಿಶೀಲಿಸಿದಾಗ ಮಂಚದ ಕೆಳಗಡೆ ಸ್ಟೀಲ್ ಪಾತ್ರೆಯಲ್ಲಿ ಜಿಂಕೆಯ ಹಸಿ ಮಾಂಸ ಕಂಡುಬಂದಿರುತ್ತದೆ. ನಂತರ ಅಡಿಗೆ ಮನೆಯನ್ನು ಪರಿಶೀಲಿಸಿದಾಗ 5 ಲೀ ಅಲ್ಯೂಮಿನಿಯಂ ಕುಕ್ಕರ್ ನಲ್ಲಿ ಅಂದಾಜು 100 ಗ್ರಾಂ ಬೇಯಿಸಿದ ಮಾಂಸ ಕಂಡು ಬಂದಿರುತ್ತದೆ. ಮನೆಯ ಅಟ್ಟವನ್ನು ಪರಿಶೀಲಿಸಿದಾಗ ಅಲ್ಯೂಮಿನಿಯಂ ಪಾತ್ರೆ ಒಂದು ಸ್ಟೀಲ್ ಲೋಟ 3 ಜಿಂಕೆಯ ಕಾಲುಗಳು, ಸಣ್ಣ ಮೊಳೆಗಳು ಕತ್ತರಿಸಿರುವ ಪ್ಲಾಸ್ಟಿಕ್ ವೈರ್ ಇದ್ದವು. ಮತ್ತೊಂದು ಕವರ ನಲ್ಲಿ 300 ಗ್ರಾಂ ಚಿಲ್ ಇತ್ತು. 2 ಜೀವಂತ ಕಾಡು ತೂಸುಗಳು ಇದ್ದವು. ಮನೆ ಸುತ್ತ ಪರಿಶೀಲಿಸಿದಾಗ ಕೊಟ್ಟಿಗೆ ಬಳಿ ಮಾಂಸ ಕತ್ತರಿಸುವ ಮಚ್ಚು ಸಿಕ್ಕಿತ್ತು.

ದಿ. 27.08.2020 ರಂದು ಮ. 12 ಗಂಟೆ ಸಮಯಕ್ಕೆ ಆರೋಪಿ 3 ಮನೆಗೆ ಚಾಸಾ 2, 7, 5, 15 ನಾನು ಬಸಪ್ಪ ನಾಯ್ಕುವಾಡಿ ಅಷ್ಟು ಜನರು ಇಲಾಖಾ ಜೀಪಿನಲ್ಲಿ ಹೋದೆವು. ಚಾಸಾ 2 ರವರ ಆದೇಶದಂತೆ ಶ್ವಾನದೊಂದಿಗೆ ಮನೆ ಸುತ್ತ ಪರಿಶೀಲಿಸುವಂತೆ ತಿಳಿಸಿದರು. ಅದರಂತೆ ನಾನು ಮತ್ತು ಶ್ವಾನ ಪರಿಶೀಲಿಸುವಾಗ ಮನೆಯ ಹಿಂಭಾಗ ಸುಮಾರು 20 ಮೀ ದೂರದಲ್ಲಿ ಒಂದು ಗುಂಡಿಯಲ್ಲಿ ಪ್ಲಾಸ್ಟಿಕ್ ಕವರ್ ನಲ್ಲಿ ಏನನ್ನು ಹೂತಿರುವುದು ಕಂಡು ಬಂದಿರುತ್ತದೆ. ತಕ್ಷಣ ಚಾಸಾ 2 ರವರಿಗೆ ತಿಳಿಸಿರುತ್ತೇನೆ. ಸದರಿ ಗುಂಡಿಯನ್ನು ತೆಗೆದು ಪರಿಶೀಲಿಸಿದಾಗ 7 ಹುಲಿಯ ಉಗರು ಇರುವ ಮಾಂಸದ ತುಂಡು, ಹಾಗೂ ಒಂದು ಹುಲಿಯ ದವಡೆ ಹಲ್ಲಿನ ತುಂಡು ಇರುವುದು ಕಂಡು ಬಂತು. ತನಿಖಾದಿಕಾರಿ ಮಹಜರ್ ಮಾಡಿ ಅಮಾನತುಪಡಿಸಿದರು.

ನಂತರ ಮಹೇಶ್ ಕುಮಾರ್ ರವರು ಚಾಸಾ 8 ರವರ ನೇತೃತ್ವದಲ್ಲಿ ಆರೋಪಿ 4 ರವರ ಮನೆಯನ್ನು ಪರಿಶೀಲಿಸಲು ಶ್ವಾನದೊಂದಿಗೆ ಹೋಗಲು ತಿಳಿಸಿದರು. ಅದರಂತೆ ದಿ. 27.08.2020 ರ0ದು ಶ್ವಾನದೊಂದಿಗೆ ಹೋದೆವು. ಮನೆಯ Store room ನಲ್ಲಿ Amul spray milk powder ಡಬ್ಬದಲ್ಲಿ ಒಂದು Special company red color empty cartridge, ಒಂದು ಕಬ್ಬಿಣದ ಸುತ್ತಿಗೆ, 7 ಸಂಖ್ಯೆಯ ಕಬ್ಬಿಣದ ತುಂಡುಗಳು ಇತ್ತು. ಅಂದಾಜು 150 ಗ್ರಾಂ ಚಿಲ್ಸ ಗಳು ಇದ್ದವು. ನಂತರ ಕೊಠಡಿಯ caboard ನ್ನು ಪರಿಶೀಲಿಸಿದಾಗ Shakthiman express company 3 red color empty cartridge, one white color empty cartridge ಇತ್ತು. ಮನೆ ಸುತ್ತ ಶ್ವಾನದೊಂದಿಗೆ ಪರಿಶೀಲಿಸಿದಾಗ ಪರಂಗಿ ಹಣ್ಣಿನ ಮರದ ಕೆಳಗಡೆ ಹುಲಿಯ ಪಾದದ 3 ಮಾಂಸದ ಪಾದದ ತುಂಡುಗಳು ದೊರಕಿರುತ್ತದೆ. ಅವುಗಳನ್ನು ತನಿಖಾದಿಕಾರಿ ಅಮಾನತುಪಡಿಸಿದರು. ಸಾಕ್ಷಿಯು ಆರೋಪಿತರನ್ನು ಹಾಗೂ ಮು. ಮಾ ಗಳನ್ನು ನೋಡಿ ಗುರುತಿಸಿರುತ್ತಾರೆ.

3 Shakthiman express company 3 red color empty cartridge ಮು. ಮಾ 16 ರಿಂದ 18 ಎಂದು ಗುರುತಿಸಲಾಯಿತು. Special company red color empty cartridge ಅನ್ನು ಮು. ಮಾ 19 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ.

ಕೃತ್ಯ ಸ್ಥಳಕ್ಕೆ ವಾಹನ ಹೋಗಲಾಗುವುದಿಲ್ಲ ಎಂದರೆ ಸರಿ. ಚಾಸಾ 20, 2, ಹಾಗೂ ಇತರೇ ಸಿಬ್ಬಂದಿ ಹಾಗೂ ನಾನು, ಶ್ವಾನ ಜೊತೆಯಲ್ಲಿ ಕೃತ್ಯ ಸ್ಥಳಕ್ಕೆ ಹೋದೆವು. ಶ್ವಾನವನ್ನು ಅರಣ್ಯ ಸಿಬ್ಬಂದಿಯವರೇ ಕರೆದುಕೊಂಡು ಹೋದರು ಶ್ವಾನ ಮುಂದೆ ಯಾರು ಇರಲಿಲ್ಲ ಎನ್ನುತ್ತಾರೆ. ಹುಲಿಯ ದೇಹ ಇದ್ದ ಕಡೆ ಶ್ವಾನ ಹೋಗಿರುತ್ತದೆ. ಆನಂತರ ಶ್ವಾನವು ಸದರಿ ಸ್ಥಳದಲ್ಲಿ ಹುಲಿ ಇದ್ದ ಸ್ಥಳ ಹೊರತುಪಡಿಸಿ ಬೇರೆ ಸ್ಥಳಕ್ಕೆ ಹೋಗಿರುವುದಿಲ್ಲ. ಸದರಿ ಸ್ಥಳದಿಂದ ಆರೋಪಿ 1 ರವರ ಮನೆ ಅಂದಾಜು 1 ಕಿ. ಮೀ ದೂರದಲ್ಲಿದೆ ಎನ್ನುತ್ತಾರೆ. ನಾನು ವೃತ್ತಿಯಲ್ಲಿ ಮೋಜಿಣಿದಾರರು ಎಂದರೆ ಸರಿ. ಶ್ವಾನ ಹೋದ ಜಾಗ, ರಸ್ತೆ ಸಾರ್ವಜನಿಕರು ಓಡಾಡುವ ಜಾಗ, ರಸ್ತೆ ಎಂದರೆ ಸರಿ. ಶ್ವಾನದ ಜೊತೆ ಅದರ handler, ನಾನು ಹಾಗೂ ಕಲ್ಲಹಾಳ ಅರಣ್ಯವಲಯದ ಸಿಬ್ಬಂದಿ ಇದ್ದರು ಸದರಿ ಸಿಬ್ಬಂದಿ ಎಷ್ಟು ಜನ ಎಂದು ನೆನಪಿಲ್ಲ. ಶ್ವಾನ ಮೊದಲು ಆರೋಪಿ 1 ರವರ ಮನೆಗೆ ಹೋಗಿರುತ್ತದೆ ನಾವು ಹಿಂದೆ ಇದ್ದೆವು. ಸದರಿ ಆರೋಪಿ 1 ರವರ ಮನೆಯ ಸಮೀಪ ಕಾಲೋನಿ, ಮನೆಗಳು ಇದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಆದಿನ ಶ್ವಾನದೊಂದಿಗೆ ಕೃತ್ಯ ಸ್ಥಳಕ್ಕೆ ಆರೋಪಿತರ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರ ಮನೆಯಲ್ಲಿ ಮಾಂಸದ ತುಂಡಗಳು ಇದ್ದವು ಅದಕ್ಕೆ ಚರ್ಮ ತೆಗೆದಿದ್ದರು. ಮಾಂಸವನ್ನು ನೋಡಿದಾಗ ಇಂತಹ ಪ್ರಾಣಿಯದ್ದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಅರಣ್ಯ ಸಿಬ್ಬಂದಿ ಸದರಿ ಮಾಂಸವನ್ನು ನೋಡಿ ಜಿಂಕೆ ಮಾಂಸ ಎಂದು ಅಭಿಪ್ರಾಯ ಪಟ್ಟಿದ್ದಾರೆ ಎನುತ್ತಾರೆ. ನಾನು ಮಾಂಸವನ್ನು ತೋರಿಸಿ ಅಲ್ಲಿಂದ ಹೊರಗೆ ಹೋಗಿರುತ್ತೇನೆ. ಆರೋಪಿ 1 ರವರನ್ನು ತನಿಖಾದಿಕಾರಿ ಪ್ರಶ್ನೆ ಮಾಡಿದರೂ ಇಲ್ಲವೋ ನಾನು ನೋಡಿರುವುದಿಲ್ಲ ಎನ್ನುತ್ತಾರೆ. ನನ್ನ ಹೇಳಿಕೆಯಲ್ಲಿ ಜಿಂಕೆ

ಮಾಂಸ ಎಂದು ಅಭಿಪ್ರಾಯ ಪಟ್ಟಿದ್ದಾರೆ ಎಂದು ಹೇಳಿರುವುದಿಲ್ಲ ಈಗ ಪ್ರಕರಣಕ್ಕಾಗಿ ಈ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಒಳಗಡೆಗೆ ನಾನು, ಶ್ವಾನ ಹಾಗೂ ಕಲ್ಲಹಾಳ ಅರಣ್ಯ ವಲಯ ಸಿಬ್ಬಂದಿಹಾಗೂ ಶ್ವಾನ handler ಮನೆ ಒಳಗಡೆ ಹೋದೆವು ಎನ್ನುತ್ತಾರೆ. ಚಾಸಾ 2 ರವರು ಮನೆ ಒಳಗಡೆ ಮತ್ತೊಂದು ಭಾಗದಲ್ಲಿ ಪರಿಶೀಲಿಸುತ್ತಿದ್ದರು. ಚಾಸಾ 2 ರವರು ನಮಗಿಂತ ಮೊದಲೆ ಮನೆಯ ಒಳಗಡೆ ಪರಿಶೀಲಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಹೇಳಿದಂತೆ ನಾನಾಗಲೀ ಚಾಸಾ 2 ರವರಾಗಲೀ ಅರಣ್ಯ ಸಿಬ್ಬಂದಿಯಾಗಲೀ, ಶ್ವಾನವಾಗಲೀ ಆರೋಪಿ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರ ಮನೆಯಲ್ಲಿ ಮಾಂಸ ಹಾಗೂ ಇತರೇ ವಸ್ತುಗಳನ್ನು ಅಮಾನತುಪಡಿಸುವಾಗ ನಾನು ಸಹ ಹಾಜರಿದ್ದೆ ಎನ್ನುತ್ತಾರೆ. ಆರೋಪಿ 1 ರವರ ಮನೆಯಲ್ಲಿ ಯಾವುದೇ ವಸ್ತುಗಳನ್ನು ಹಾಗೂ ಮಾಂಸವನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ.

ಅರಣ್ಯ ಸಿಬ್ಬಂದಿ ಆರೋಪಿ 3 ರವರ ಮನೆಯನ್ನು ನಮಗೆ ಹಾಗೂ ಶ್ವಾನಕ್ಕೆ ತೋರಿಸಿದರು. ಅಲ್ಲಿ ದೊರೆತ 7 ಮಾಂಸದ ತುಂಡುಗಳನ್ನು ತನಿಖಾಧಿಕಾರಿ ಅಮಾನತುಪಡಿಸಿದರು. ಬಿಳಿ ಬಟ್ಟೆಯಲ್ಲಿ ಸುತ್ತಿದರೊ ಇಲ್ಲವೋ ನನಗೆ ನೆನಪಿಲ್ಲ. ನಾನು ಹೇಳಿದಂತೆ ಮಾಂಸದ ತುಂಡುಗಳನ್ನು ಅಮಾನತುಪಡಿಸಿಲ್ಲ ಅದ ಕಾರಣ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. ದವಡೆ ಹಲ್ಲನು ತೋರಿಸಿ ನಾವು ಬೇರೆ ಸ್ಥಳದಲ್ಲಿ ಪರಿಶೀಲಿಸಲು ಹೋದೆವು. ಆನಂತರ ತನಿಖಾದಿಕಾರಿ ದವಡೆ ಹಲ್ಲನ್ನು ಏನು ಮಾಡಿದರೂ ನನಗೆ ಗೊತ್ತಿಲ್ಲ. ನನ್ನ ಹೇಳಿಕೆಯಲ್ಲೂ ದವಡೆ ಹಲ್ಲು ಸಿಕ್ಕಿರುತ್ತದೆ ಎಂದು ಹೇಳಿರುತ್ತೇನೆ, ಮುಂದುವರೆದು ಹೇಳಿರುವುದಿಲ್ಲ ಎನ್ನುತ್ತಾರೆ. ಆರೋಪಿ ರವರ ಮನೆಯಲ್ಲಿ ದವಡೆ ಹಲ್ಲು, ಯಾವುದೇ ವಸ್ತುಗಳನ್ನು ಹಾಗೂ ಮಾಂಸವನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ಆ ದಿನದ ನಂತರ ದವಡೆ ಹಲ್ಲನ್ನು ನಾನು ಪುನಃ ನೋಡಿಲ್ಲ ಎಂದರೆ ಸರಿ.

ಆರೋಪಿ 4 ರವರಮನೆಗೆ ಹೋದಾಗ ತನಿಖಾದಿಕಾರಿಗೆ ಕಾಡು ತೂಸನ್ನು ತೋರಿಸಿ ನಾವು ಬೇರೆ ಸ್ಥಳದಲ್ಲಿ ಪರಿಶೀಲಿಸಲು ಹೋದೆವು. ಆನಂತರ ತನಿಖಾನಿಕಾರಿ ಕಾಡುತೂಸನ್ನು ಏನು ಮಾಡಿದರೂ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ Special company red color empty cartridge,

ಒಂದು ಕಬ್ಬಿಣದ ಸುತ್ತಿಗೆ, 7 ಸಂಖ್ಯೆಯ ಕಬ್ಬಿಣದ ತುಂಡುಗಳು, ಅಂದಾಜು 150 ಗ್ರಾಂ ಚೆಲ್ಸ್ ಗಳು, Shakthiman express company 3 red color empty cartridge, one white color empty cartridge ಗಳನ್ನು ಅಮಾನತುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ cartridge ಗಳನ್ನು ಹಾಗೂ ಇತರೇ ವಸ್ತುಗಳನ್ನು ಹಾಗೂ ಮು. ಮಾ ಗಳನ್ನು ಆರೋಪಿತರ ಮನೆಯಲ್ಲಿ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ಮನೆಗೆ ಶ್ವಾನದೊಂದಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾದಿಕಾರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಕ್ಕೂ, ಈ ಪ್ರಕರಣಕ್ಕೂ, ಮು ಮಾ ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)